**ಹೆಚ್ಚುವರಿ ದೀವಾಣಿ ನ್ಯಾಯಾಧೀಶರು ಹಾಗೂ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,**
**ಖಾನಾಪೂರ**
**ಸಿ.ಸಿ.ನಂ.೫೩೫/೧೬**

**ಪಿಡಬ್ಲು ೧**
**ಸಿಡಬ್ಲು ೧**

ಹೆಸರು : ದಾಮು ಭೀಮು ಚೌಹಾನ
ವಯಸ್ಸು : ೪೯ ವರ್ಷ
ಉದ್ಯೋಗ : ಸಹಾಯಕ ಕೃಷಿ ನಿರ್ದೇಶಕರು
ವಾಸ : ಕೃಷಿ ಇಲಾಖೆ, ಖಾನಾಪೂರ.

**ದಿನಾಂಕ ೧೨-೦೩-೨೦೧೮ ರಂದು ಸಾಕ್ಷಿಗೆ ಪ್ರಮಾಣ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ : ಎಪಿಪಿ ಅವರಿಂದ.**

ನಾನು **೦೮-೦೮-೨೦೧೩** ರಿಂದ ಇಲ್ಲಿಯವರೆಗೆ ಖಾನಾಪೂರದಲ್ಲಿ ರಸಗೊಬ್ಬರ ಪರಿವೀಕ್ಷಕರು ಮತ್ತು ಸಹಾಯಕ ಕೃಷಿ ನಿರ್ದೇಶಕರಾಗಿ ಕೆಲಸ ಮಾಡುತ್ತಿದ್ದೇನೆ. **೧**ನೇ ಆರೋಪಿಯು ರಾಸಾಯನಿಕ ಗೊಬ್ಬರದ ತಯಾರಕರಿದ್ದು, **೨**ನೇ ಆರೋಪಿಯು ಆ ಕಂಪನಿಯ ಪ್ರತಿನಿಧಿಯಾಗಿರುತ್ತಾರೆ.

ದಿನಾಂಕ **೩೧-೦೫-೨೦೧೬** ರಂದು ಮಧ್ಯಾಹ್ನ **೨.೦೦** ಗಂಟೆಗೆ ಜುಂಜವಾಡ ಕೆ.ಎನ್ ಖಾನಾಪೂರದಲ್ಲಿ ಇರುವ ಆರೋಪಿತರ ರಸಗೊಬ್ಬರ ತಯಾರಕ ಘಟಕಕ್ಕೆ ನಾನು ಮತ್ತು ಚಾಸಾ **೫** ರಿಂದ **೯** ರವರು ಭೇಟಿ ನೀಡಿದೆವು. ಅಲ್ಲಿ ಚಾಸಾ **೩** ಮತ್ತು **೪** ರವರು ಹಾಜರಿದ್ದರು. ಅವರ ಸಮಕ್ಷಮ ಪರಿಶೀಲಿಸಲಾಗಿ ಅಲ್ಲಿ ಆರೋಪಿತರು ನೋಟಿಫೈಡ್ ಇಲ್ಲದ ರಸಗೊಬ್ಬರಗಳನ್ನು ತಯಾರಿಸಿ ಪರವಾನಿಗೆ ಇಲ್ಲದೆ ದಾಸ್ತಾನು ಮಾಡಿದ್ದರು. ಆ ರಸಗೊಬ್ಬರಗಳಲ್ಲಿ ಎಂದರೆ **೨೦:೨೦:೦:೧೩ ಎನ್**.ಪಿ.ಕೆ.**ಎಸ್** ಗ್ರಾನುಲೇಟೆಡ ರಸಗೊಬ್ಬರದ **೫೦** ಕೆ.ಜಿ.ಯ ಒಟ್ಟು **೧,೮೪೦** ಚೀಲಗಳು ಇದ್ದವು. ಅವುಗಳಲ್ಲಿ **೧೦** ಚೀಲಗಳಿಂದ ರಾಂಡಮ ಆಗಿ ಗೊಬ್ಬರವನ್ನು ಪಡೆದು ಅವುಗಳಿಂದ ರಾಂಡಮ್ ಆಗಿ ಕಾಟರಿಂಗ ಪದ್ಧತಿ ಬಳಸಿ ರಸಗೊಬ್ಬರದ ಮಾದರಿಯನ್ನು ಪ್ರತ್ಯೇಕವಾಗಿ **೪೦೦** ಗ್ರಾಂ. ನ **೩** ಮಾದರಿಗಳನ್ನು ಪಾಲಿಥಿನ ಚೀಲಗಳಲ್ಲಿ ಪಡೆದು ಸಂಗ್ರಹಿಸಿ ಅವುಗಳನ್ನು ಸೀಲ್ ಮಾಡಿ ಅವುಗಳಿಗೆ **ಎಲ್**.ಡಿ.ಆರ್ ಎಂದು ಹೆಸರು ನಮೂದಿಸಿದೆವು. ಸ್ಥಳದಲ್ಲಿ ಈ ಬಗ್ಗೆ ಜೆ-ಫಾರಂನಲ್ಲಿ ನಮೂದಿಸಿದೆವು. ಸ್ಥಳದಲ್ಲಿ ಪಂಚನಾಮೆ ಮಾಡಿದೆವು. ಸಂಗ್ರಹಿಸಿದ **೩** ಮಾದರಿಗಳಲ್ಲಿ **೧**ನೇ ಮಾದರಿಯನ್ನು ಸ್ಥಳದಲ್ಲಿ ಹಾಜರಿದ್ದ **೧**ನೇ ಆರೋಪಿಯ ತಂದೆಗೆ ಹಸ್ತಾಂತರಿಸಿದೆವು. ಅವರು ಅದನ್ನು ಪಡೆದ ಬಗ್ಗೆ ಸ್ವೀಕೃತಿ ಪಡೆದುಕೊಂಡೆವು.

ಅದೇ ದಿನ ೧ನೇ ಆರೋಪಿಗೆ ನಾವು ನೋಟಿಫೈಡ ಅಲ್ಲದ ಗೊಬ್ಬರವನ್ನು ತಯಾರಿಸಿ ದಾಸ್ತಾನು ಮಾಡಿದ ಬಗ್ಗೆ ಕಾರಣ ಕೇಳಿ ನೋಟೀಸು ಕೊಟ್ಟಿದ್ದೆ. ಆ ನೋಟಿಸಿಗೆ ೧ನೇ ಆರೋಪಿಯು ತಾನು ಪರವಾನಿಗೆಗಾಗಿ ಅರ್ಜಿ ಸಲ್ಲಿಸಿದ್ದು ಪರವಾನಿಗೆ ಇನ್ನೂ ದೊರೆತಿರಲಿಲ್ಲ ಆದರೂ ಸಹ ರಸಗೊಬ್ಬರವನ್ನು ತಯಾರಿಸಿದ್ದು ತಪ್ಪಾಗಿದೆ ಎಂದು ಉತ್ತರಿಸಿದರು. ೧ನೇ ಮಾದರಿಯನ್ನು ದಿನಾಂಕ **೦೧-೦೬-೨೦೧೬** ರಂದು ರಸಗೊಬ್ಬರ ನಿಯಂತ್ರಣ ಪ್ರಯೋಗಾಲಯ, ಬೆಳಗಾವಿ ಅವರಲ್ಲಿ ರಾಸಾಯನಿಕ ವಿಶ್ಲೇಷಣೆಗಾಗಿ ಕಳುಹಿಸಿಕೊಟ್ಟೆ. ಇನ್ನೊಂದು ಮಾದರಿಯನ್ನು ಉಪ ಕೃಷಿ ನಿರ್ದೇಶಕರು, ಬೆಳಗಾವಿರವರಿಗೆ ಸಲ್ಲಿಸಿದೆ. ದಿನಾಂಕ **೦೩-೦೬-೨೦೧೬** ರಂದು ಪ್ರಯೋಗಾಲಯದಿಂದ ಸದರಿ ರಸಗೊಬ್ಬರವು ಕಳಪೆ ರಸಗೊಬ್ಬರ ಎಂದು ವರದಿ ಬಂದಿರುತ್ತದೆ. ದಿನಾಂಕ **೦೪-೦೬-೨೦೧೬** ರಂದು ಜಿಲ್ಲಾಧಿಕಾರಿಗೆ ನೋಟಿಫೈಡ ಅಲ್ಲದ ಮತ್ತು ಪರವಾನಿಗೆ ಪಡೆಯದ ಕಳಪೆ ಗುಣಮಟ್ಟದ ಗೊಬ್ಬರವನ್ನು ಜಪ್ತು ಪಡಿಸುವಂತೆ ಕೋರಿ ಪತ್ರ ಬರೆದೆನು. ನಂತರ ಜಿಲ್ಲಾಧಿಕಾರಿಯು ದಿನಾಂಕ **೦೨-೦೭-೨೦೧೬** ರಂದು ನನಗೆ ನಾನೇ ಹೋಗಿ ಜಪ್ತುಪಡಿಸುವಂತೆ ಮತ್ತು ಅದನ್ನು ಮರು ವಿಶ್ಲೇಷಣೆ ಆಧಾರದ ಮೇಲೆ ಬೆಲೆ ನಿಗದಿ ಪಡಿಸಿ, ಮಾರಾಟ ಮಾಡಿ ಅದನ್ನು ನಮ್ಮ ಇಲಾಖೆಯ ಖಾತೆಯಲ್ಲಿ  ಜಮಾ ತೆಗೆದುಕೊಳ್ಳುವಂತೆ ಆದೇಶಿಸಿದರು.

ನಾವು ದಿನಾಂಕ **೩೧-೦೫-೨೦೧೬** ರಂದು ಸದರಿ ರಸಗೊಬ್ಬರವನ್ನು ಜಪ್ತುಪಡಿಸಿಕೊಂಡು ೧ನೇ ಆರೋಪಿಯ ವಶಕ್ಕೆ ಕೊಟ್ಟಿದ್ದೆವು. ಜಿಲ್ಲಾಧಿಕಾರಿಯ ಆದೇಶದ ನಂತರ ಆ ಗೊಬ್ಬರದ ಪ್ರಮಾಣವನ್ನು ಸರಿಪಡಿಸಿ, ಹರಾಜು ಪ್ರಕ್ರಿಯೆಯಲ್ಲಿ ಮಾರಾಟ ಮಾಡಿದೆವು. ರಾಸಾಯನಿಕ ಪರೀಕ್ಷಾ ವರದಿ ಬಂದ ನಂತರ ೧ನೇ ಆರೋಪಿಗೆ ನೋಟಿಸು ಕೊಟ್ಟೆ. ಅದಕ್ಕೆ ೧ನೇ ಆರೋಪಿಯು ದಿನಾಂಕ **೦೬-೦೬-೨೦೧೬** ರಂದು ಉತ್ತರ ನೀಡಿದ್ದು ಅದರಲ್ಲಿ ಸದರಿ ಗೊಬ್ಬರವನ್ನು ನೋಟಿಫೈಡ ಗೊಬ್ಬರವಾಗಿ ಪರಿವರ್ತಿಸುವುದಾಗಿ ತಿಳಿಸಿದ್ದರು. ನಂತರ ದಿನಾಂಕ **೦೭-೦೬-೨೦೧೬** ರಂದು ಜಿಲ್ಲಾಧಿಕಾರಿಯವರು ೧ನೇ ಆರೋಪಿಗೆ ಕಾರಣ ಕೇಳುವ ನೋಟಿಸನ್ನು ನೀಡಿರುತ್ತಾರೆ. ನಂತರ ನಾನು ನ್ಯಾಯಾಲಯಕ್ಕೆ ದೂರು ಸಲ್ಲಿಸಿದೆ. ಆರೋಪಿತರು ನೋಟಿಫೈಡ ಇಲ್ಲದ, ಪರವಾನಿಗೆ ಇಲ್ಲದ ಕಳಪೆ ಗುಣಮಟ್ಟದ ರಸಗೊಬ್ಬರವನ್ನು ತಯಾರಿಸಿ, ದಾಸ್ತಾನು ಮಾಡಿ, ಅದನ್ನು ಸಾರ್ವಜನಿಕರಿಗೆ ಮಾರಾಟ ಮಾಡಿ ಅಪರಾಧ ಮಾಡಿದ್ದರಿಂದ ಅವರನ್ನು ಶಿಕ್ಷಿಸಬೇಕಾಗಿ ಕೇಳಿಕೊಳ್ಳುತ್ತೇನೆ.

ಆ ದಿನ ತೆಗೆದ ಸ್ಯಾಂಪಲನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು **೪೦೦** ಗ್ರಾಂ. ನ ಸದರಿ ಸ್ಯಾಂಪಲನ್ನು ನೋಡಿ ಗುರುತಿಸಿದ್ದು ಸದರಿ ಪಾಕೇಟನ್ನು ಒಟ್ಟಾಗಿ ಎಂ.ಒ ೧ ಎಂದು ಗುರುತಿಸಲಾಯಿತು. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಇಬ್ಬರು ಆರೋಪಿತರು ಗೈರು

ಹಾಜರಿದ್ದು ಅವರನ್ನು ಗುರುತಿಸಲು ಅವರ ಪರ ವಕೀಲರು ಯಾವುದೇ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.

(ಸಸಅ ರವರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರಗೆ ಬೆರಳಚ್ಚು ಮಾಡಲಾಗಿದೆ)

ಓ .ಹೇ .ಕೇ .ಸರಿ ಇದೆ .

ಹೆಚ್ಚುವರಿ ನ್ಯಾಯಿಕ ದಂಡಾಧಿಕಾರಿಗಳು, ಖಾನಾಪೂರ.

ಸಾಕ್ಷಿಯು ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ ೧ ಎಂದು ಗುರುತಿಸಲಾಯಿತು. ಪಂಚನಾಮೆಯಲ್ಲಿನ ತನ್ನ ಸಹಿಯನ್ನು ನಿಪಿ ೧(ಎ) ಎಂದು, ನಿಪಿ ೧ಕ್ಕೆ ಪಂಚರು ಮತ್ತು ೧ನೇ ಆರೋಪಿ ಸಹಿ ಮಾಡಿದ್ದರು. ಸ್ಥಳದಲ್ಲಿ ತಯಾರಿಸಿದ ಜೆ ಫಾರಂ ನ್ನು ನಿಪಿ ೨ ಎಂದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ ೨(ಎ) ಎಂದು, ಸ್ಥಳದಲ್ಲಿ ರಸಗೊಬ್ಬರವನ್ನು ಜಪ್ತುಪಡಿಸಿಕೊಂಡ ಬಗ್ಗೆ ದಾಖಲೆಯನ್ನು ಬರೆದಿದ್ದು ಅದನ್ನು ನಿಪಿ ೩ ಎಂದು, ಸ್ಥಳದಲ್ಲಿ ದಾಖಲೆಗಳನ್ನು ಜಪ್ತು ಪಡಿಸಿಕೊಂಡು ದಾಖಲೆಗಳನ್ನು ನನ್ನ ಸ್ವಾಧೀನಕ್ಕೆ ಪಡೆದ ಬಗ್ಗೆ ಹಿಂಬರಹವನ್ನು ಕೊಟ್ಟಿದ್ದು, ಅದನ್ನು ನಿಪಿ ೪ ಎಂದು, ಮಾದರಿಯನ್ನು ರಾಸಾಯನಿಕ ಪರೀಕ್ಷೆಗಾಗಿ ಕಳುಹಿಸಿಕೊಟ್ಟಿದ್ದು ಅದನ್ನು ಸ್ವೀಕರಿಸಿದ ಸ್ವೀಕೃತಿಯನ್ನು ನಿಪಿ ೫ ಎಂದು, ಸ್ಥಳದಲ್ಲಿ ತೆಗೆದ ಒಂದು ಮಾದರಿಯನ್ನು ೧ನೇ ಆರೋಪಿಗೆ ಕೊಟ್ಟ ಬಗ್ಗೆ ಹಿಂಬರಹವನ್ನು ನಿಪಿ ೬ ಎಂದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ ೬(ಎ) ಎಂದು, ರಾಸಾಯನಿಕ ಪರೀಕ್ಷಾ ವರದಿಯನ್ನು ನಿಪಿ ೭ ಎಂದು, ೧ನೇ ಆರೋಪಿಗೆ ಕೊಟ್ಟ ಬಗ್ಗೆ ನೋಟೀಸಿನ ಪ್ರತಿಯನ್ನು ನಿಪಿ ೮ ಎಂದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ ೮(ಎ) ಎಂದು, ಕಳಪೆ ಗುಣಮಟ್ಟದ ಬಗ್ಗೆ ಜಂಟಿ ನಿರ್ದೇಶಕರಿಗೆ ನೀಡಿದ ಮಾಹಿತಿ ಪತ್ರವನ್ನು ನಿಪಿ ೯ ಎಂದು, ೧ನೇ ಆರೋಪಿಗೆ ಕಾರಣ ಕೇಳಿ ಕೊಟ್ಟ ನೋಟೀಸನ್ನು ನಿಪಿ ೧೦ ಎಂದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ ೧೦(ಎ) ಎಂದು, ೧ನೇ ಆರೋಪಿಯು ನೋಟೀಸಿಗೆ ಕೊಟ್ಟ ಉತ್ತರವನ್ನು ನಿಪಿ ೧೧ ಎಂದು, ನಾನು ಜಿಲ್ಲಾಧಿಕಾರಿಗೆ ಬರೆದ ಪತ್ರದ ಪ್ರತಿಯನ್ನು ನಿಪಿ ೧೨ ಎಂದು, ನಾನು ಖಾನಾಪೂರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬಗ್ಗೆ ಸರ್ಕಾರದ ಅಧಿಸೂಚನೆಯ ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ ೧೩ ಎಂದು, ಸ್ಥಳದಲ್ಲಿ ತಯಾರಿಸಿದ ಕೆ ಫಾರಂ ನ್ನು ನಿಪಿ ೧೪ ಎಂದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ ೧೪(ಎ) ಎಂದು ಗುರುತಿಸಲಾಯಿತು. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಇಬ್ಬರು ಆರೋಪಿತರು ಗೈರು ಹಾಜರಿದ್ದು ಅವರನ್ನು ಗುರುತಿಸಲು ಅವರ ಪರ ವಕೀಲರು ಯಾವುದೇ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.